ನಿಜಕ್ಕೂ ಅಷ್ಟು ದುಡ್ಡು ಕೊಡುವ ಶಕ್ತಿ ನನಗಿಲ್ಲ ಎಂದು ಉತ್ತರಿಸಿದವನು ಯೋಚಿಸತೊಡಗಿದೆ. ಒಂದೋ ಎರಡೋ ನಿಮಿಷಗಳ ಅನಂತರ ನನಗೊಂದು ಉಪಾಯ ಹೊಳೆಯಿತು.

"ನಾವು ಅದಲುಬದಲು ಮಾಡಿಕೊಳ್ಳೋಣ. ನೀವು ಒಂದು ಬೈಬಲ್, ಒಂದಷ್ಟು ರೂಪಾಯಿ ಕೊಟ್ಟು ಈ ಪುಸ್ತಕವನ್ನು ಪಡಕೊಂಡಿರಿ. ನಾನು ಇದೀಗಷ್ಟೇ ನನಗೆ ಸಂದಾಯವಾಗಿರುವ ನನ್ನ ಪೆನ್ಷನ್ನಿನ ಹಣದ ಜೊತೆಗೆ ಕಪ್ಪು ಅಕ್ಷರದ ನನ್ನ ವಿಕ್ಲಿಫ್ ಬೈಬಲನ್ನೂ ಕೊಡಬಲ್ಲೆ ನಿಮಗೆ. ಆ ಬೈಬಲ್ಲು ನನ್ನ ಪೂರ್ವಜರಿಂದ ನನಗೆ ಬಂದದ್ದು" ಎಂದು ಹೇಳಿದೆ.

"ಕಪ್ಪು ಅಕ್ಷರದ ವಿಕ್‌ಲಿಫ್!" ಅವನು ಗೊಣಗುಟ್ಟಿದ.

ನಾನು ನನ್ನ ಮಲಗುವ ಕೋಣೆಗೆ ಹೋಗಿ ದುಡ್ಡನ್ನೂ ಪುಸ್ತಕವನ್ನೂ ತಂದುಕೊಟ್ಟೆ. ಅವನು ಪುಸ್ತಕದ ಪುಟಗಳನ್ನು ತಿರುಗಿಸಿ, ಒಬ್ಬ ನಿಜವಾದ ಪುಸ್ತಕಪ್ರೇಮಿಯೊಬ್ಬನ ಉತ್ಸಾಹದಿಂದ ಶೀರ್ಷಿಕೆಯ ಪುಟವನ್ನು ಪರಿಶೀಲಿಸಿದ.

"ಒಳ್ಳೆ ವ್ಯವಹಾರ" ಎಂದ.

ಅವನು ಚೌಕಾಶಿ ಮಾಡಲಿಲ್ಲವೆಂದು ನನಗೆ ಆಶ್ಚರ್ಯವಾಯಿತು. ಆಮೇಲಷ್ಟೇ ನನಗೆ ಅವನು ಆ ಪುಸ್ತಕವನ್ನು ಮಾರಬೇಕೆಂದು ತೀರ್ಮಾನಿಸಿಯೇ ನನ್ನ ಮನೆಯೊಳಗೆ ಬಂದಿದ್ದನೆಂದು ಅರಿವಾದದ್ದು. ಹಣವನ್ನು ಎಣಿಸದೆ ಜೇಬಿನಲ್ಲಿಟ್ಟುಕೊಂಡ.

ನಾವು ಇಂಡಿಯಾದ ಬಗ್ಗೆ, ಓರ್ಕ್ನೀ ಬಗ್ಗೆ, ಒಂದು ಕಾಲದಲ್ಲಿ ಅದನ್ನಾಳಿದ ನಾರ್ವೇಜಿಯನ್ನರ ಬಗ್ಗೆ ಮಾತಾಡಿದೆವು. ಆ ಮನುಷ್ಯ ಹೊರಟುಹೋದಾಗ ರಾತ್ರಿಯಾಗಿತ್ತು. ಆಮೇಲೆ ನಾನು ಮತ್ತೆಂದೂ ಅವನನ್ನು ನೋಡಲಿಲ್ಲ; ಅವನ ಹೆಸರೂ ನನಗೆ ಗೊತ್ತಿಲ್ಲ.

ಆ 'ಮರಳ ಹೊತ್ತಿಗೆ'ಯನ್ನು ನನ್ನ ಶೆಲ್ಫಿನಲ್ಲಿ ವಿಕ್ಲಿಫ್ ಬೈಬಲ್ ಇದ್ದ ಜಾಗದಲ್ಲಿ ಇಡಬೇಕೆಂದುಕೊಂಡೆ. ಆದರೆ, ಕಡೆಗೆ ಅದನ್ನು 'ಒಂದುಸಾವಿರದೊಂದು ರಾತ್ರಿ'ಯ ಕೆಲವು ಹರಿದುಹೋದ ಸಂಪುಟಗಳ ಹಿಂದೆ ಇಡುವುದೆಂದು ತೀರ್ಮಾನಿಸಿದೆ. ಹಾಸಿಗೆಯಲ್ಲಿ ಮಲಗಿಕೊಂಡರೂ ನಿದ್ದೆ ಬರಲಿಲ್ಲ. ಬೆಳಗಿನ ಜಾವ ಮೂರೋ ನಾಲ್ಕೋ ಗಂಟೆಗೆ ದೀಪ ಹಾಕಿದೆ. ಆ ಅಸಾಧ್ಯ ಪುಸ್ತಕವನ್ನು ಕೆಳಗಿಳಿಸಿ ಅದರ ಪುಟಗಳನ್ನು ತಿರುಗಿಸತೊಡಗಿದೆ. ಒಂದು ಪುಟದಲ್ಲಿ ಒಂದು ಮುಖವಾಡದ ಚಿತ್ರ ಕಾಣಿಸಿತು. ಆ ಪುಟದ ಮೇಲ್ಭಾಗದಲ್ಲಿ ಹಲವು ಬಾರಿ ಗುಣಿಸಬಹುದಾದ ಒಂದು ಸಂಖ್ಯೆ ಇತ್ತು. ಅದೆಷ್ಟು ಎಂದು ನನಗೆ ನೆನಪಾಗುತ್ತಿಲ್ಲ.

ನಾನು ನನ್ನ ಆ ಸಂಪತ್ತನ್ನು ಬೇರೆ ಯಾರಿಗೂ ತೋರಿಸಲಿಲ್ಲ. ಅದು ನನ್ನದಾಯಿತೆಂಬ ಅದೃಷ್ಟದ ಜೊತೆಗೆ ಯಾರಾದರೂ ಅದನ್ನು ಕದ್ದುಬಿಟ್ಟಾರೆಂಬ ಭಯವೂ, ಅದು ನಿಜಕ್ಕೂ ಅಪರಿಮಿತವಾಗಿರಲಿಕ್ಕಿಲ್ಲವೆಂಬ ಸಂಶಯವೂ ಸೇರಿಕೊಂಡಿತು. ಈ ಎರಡು ಯೋಚನೆಗಳು ನನ್ನ ಹಳೆಯ ಮನುಷ್ಯದ್ವೇಷವನ್ನು ಇಮ್ಮಡಿಗೊಳಿಸಿದವು. ನನಗೆ ಕೆಲವೇ ಸ್ನೇಹಿತರಿದ್ದರು; ಅವರನ್ನು ಭೇಟಿ ಮಾಡುವುದನ್ನು ನಿಲ್ಲಿಸಿದೆ. ಆ ಪುಸ್ತಕದ ಕೈದಿಯಾದವನು ಹೆಚ್ಚುಕಡಿಮೆ ಹೊರಗೇ ಕಾಲಿಡಲಿಲ್ಲವೆನ್ನಬೇಕು. ಭೂತಗನ್ನಡಿ ಇಟ್ಟುಕೊಂಡು ಅದರ ಸವೆದುಹೋದ ಬೆನ್ನನ್ನೂ ಹೊದಿಕೆಯನ್ನೂ ಪರಿಶೀಲಿಸಿದ ಮೇಲೆ ಯಾವುದಾದರೂ ಸಂಚೋ ಉಪಾಯವೋ ಇದ್ದೀತೆಂಬ ವಿಚಾರವನ್ನು ತಳ್ಳಿಹಾಕಿದೆ. ಸಣ್ಣ ಸಣ್ಣ ಚಿತ್ರಗಳು ಎರಡು ಸಾವಿರ ಪುಟಗಳಿಗೊಮ್ಮೆ ಬರುತ್ತವೆಯೆಂದು ಕಂಡುಕೊಂಡೆ. ಅವುಗಳನ್ನು ಒಂದು ಅಕಾರಾದಿ ನೋಟ್‌ಬುಕ್ಕಿನಲ್ಲಿ ಬರೆದುಕೊಳ್ಳತೊಡಗಿದೆ. ಬಹು ಬೇಗ ನೋಟ್‌ಬುಕ್ಕು ತುಂಬಿಹೋಯಿತು. ಆ ಚಿತ್ರಗಳು ಒಮ್ಮೆಯೂ ಪುನರಾವರ್ತನೆಗೊಳ್ಳುತ್ತಿರಲಿಲ್ಲ. ರಾತ್ರಿಯ ಹೊತ್ತು ನಿದ್ದೆಯಿಲ್ಲದ ಸ್ಥಿತಿಯಿಂದ ಅಪರೂಪವಾಗಿ ಬಿಡುಗಡೆಗೊಳ್ಳುತ್ತಿದ್ದ ಅವಧಿಯಲ್ಲಿ ಆ ಪುಸ್ತಕದ ಕನಸು ಕಂಡೆ.